# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 644

ಸದಸ್ಯರ ಹೆಸರು: ಶ್ರೀ.ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ: 12.07.2023

ಉತ್ತರಿಸುವವರು: ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆಸಚಿವರು

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದಲ್ಲಿ ರೇಷ್ಮೆಗೂಡಿನ ಬೆಲೆ ಕುಸಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿನ ರೇಷ್ಮೆಗೂಡಿನ ಬೆಲೆಯು ಮಾರ್ಚ್-2023 ರಿಂದ ಸ್ವಲ್ಪ ಮಟ್ಟಿಗೆ ಕುಸಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಡಾ. ಬಸವರಾಜ್ ಹೆಚ್. ರವರು ಶಿಫಾರಸ್ಸು ಮಾಡಿರುವ ತಾಂತ್ರಿಕ ಸಮಿತಿ ವರದಿಯಲ್ಲಿ ಗೂಡಿನ ಉತ್ಪಾದನಾ ವೆಚ್ಚವನ್ನುಕಾಲಕಾಲಕ್ಕೆ ಪರಿಷ್ಕರಿಸಿಕೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಮಿಶ್ರತಳಿ ಪ್ರತಿಕೆ.ಜಿ. ಗೂಡಿಗೆ ರೂ.310/- ಮತ್ತು ದ್ವಿತಳಿ ಪ್ರತಿಕೆ.ಜಿ. ಗೂಡಿಗೆ ರೂ.365/- ಗೂಡಿನ ಉತ್ಪಾದನಾ ವೆಚ್ಚ ಇರುತ್ತದೆ. ಆದರೆ ಪ್ರಸ್ತುತದವರೆಗೂ ನಿರಂತರವಾಗಿ ಸರಾಸರಿ ಗೂಡಿನ ಬೆಲೆಯು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಯಾಗಿರುವುದಿಲ್ಲ. |
| ಆ | ಇತ್ತೀಚಿನ ವರ್ಷಗಳಲ್ಲಿ ರೇಷ್ಮೆ ಹುಳುವಿನಲ್ಲಿ ಕಂಡುಬಂದಿರುವ ಫೆಬ್ರೀನ್ ರೋಗವು ಉದ್ಯಮದಲ್ಲಿ ಭಾರಿ ಆರ್ಥಿಕ ನಷ್ಟವನ್ನು ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಸ್ತುತ ಮೈಸೂರು ಬಿತ್ತನೆ ಪ್ರದೇಶದಲ್ಲಿ ಗಂಟುರೋಗ (ಪೆಬ್ರೀನ್) ಸಮಸ್ಯೆ ಇರುವುದಿಲ್ಲ. |
| ಇ | ಹಾಗಿದ್ದಲ್ಲಿ; ಫೆಬ್ರೀನ್ ರೋಗವನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಮೈಸೂರು ಬಿತ್ತನೆ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೇಷ್ಮೆ ಇಲಾಖೆಯ ಸಿಬ್ಬಂದಿಗಳಿಗೆ ಬೀಜೋತ್ಪಾದನೆಯ ವಿವಿಧ ಹಂತಗಳಾದ ಮೊಟ್ಟೆ, ಹುಳು, ಕೋಶ, ಚಿಟ್ಟೆಪರೀಕ್ಷೆಯನ್ನು ಸೂಕ್ಷ್ಮದರ್ಶಕ ಯಂತ್ರದ ಮೂಲಕ ಪೆಬ್ರಿನ್ ರೋಗ ಪರೀಕ್ಷಿಸುವ ಕುರಿತು ತರಬೇತಿ ನೀಡಿ ನಿರಂತರವಾಗಿ ಕ್ರಮವಹಿಸಿ, ಪೆಬ್ರಿನ್ ರೋಗ ತಡೆಗಟ್ಟುವ ಕುರಿತು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಲಾಗುತ್ತಿದೆ.<br>ಮುಂದುವರೆದು, ಕೇಂದ್ರ ರೇಷ್ಮೆ ಸಂಶೋಧನಾ ಸಂಸ್ಥೆಯ (ಎಸ್.ಎಸ್.ಟಿ.ಎಲ್,ಕೊಡತಿ) ಮತ್ತು ಕೆ.ಎಸ್.ಎಸ್.ಆರ್.ಡಿ.ಐ,ತಲಘಟ್ಟಪುರ ಸಂಸ್ಥೆಯ ವಿಜ್ಞಾನಿಗಳನ್ನೊಳಗೊಂಡ ಜಂಟಿ ತಂಡವು ಮೈಸೂರು ಬಿತ್ತನೆ ಪ್ರದೇಶದಲ್ಲಿ ಕ್ಷೇತ್ರಮಟ್ಟದಲ್ಲಿ ಬೀಜೋತ್ಪಾದನೆಯ ವಿವಿಧ ಹಂತದ ರೇಷ್ಮೆಹುಳುವಿನ ಮಾದರಿಗಳನ್ನು ಸಂಗ್ರಹಿಸಿ ಬೇಸಿಗೆ / ಮಳೆ /ಚಳಿಗಾಲ ವರ್ಷದ ಮೂರು ಅವಧಿಗಳಲ್ಲಿ ಸಂಪೂರ್ಣವಾಗಿ ಪರೀಕ್ಷಿಸಲಾಗುತ್ತದೆ.<br>➢ ಮೈಸೂರು ಬಿತ್ತನೆ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಸಿಬ್ಬಂದಿಗಳು ಕ್ಷೇತ್ರಮಟ್ಟದಲ್ಲಿ ರೇಷ್ಮೆ ಬೀಜೋತ್ಪದನಾ ಹಂತದಲ್ಲಿರುವ ಬೆಳೆಗಳ ಮಾದರಿಯನ್ನು ಸಂಗ್ರಹಿಸಿ ಪ್ರತಿನಿತ್ಯ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.<br>➢ ಕ್ಷೇತ್ರಮಟ್ಟದಲ್ಲಿ ಬೀಜೋತ್ಪಾದನೆ ಮಾಡುತ್ತಿರುವ ರೇಷ್ಮೆಬೆಳೆಗಾರರಿಗೆ ಸಾಮೂಹಿಕ ಸೋಂಕು |

<table>
<tr><td></td><td></td><td>ನಿವಾರಣೆಗೆ ಅವಶ್ಯವಿರುವ ಸೋಂಕು ನಿವಾರಕಗಳನ್ನು ಸರ್ಕಾರದಿಂದಲೇ ಉಚಿತವಾಗಿ ಸರಬರಾಜು ಮಾಡಿ ಸೋಂಕು ನಿವಾರಣೆ ಮಾಡಿಸಲಾಗುತ್ತಿದೆ.</td></tr>
<tr><td>ಈ</td><td>ಫೆಬ್ರೀನ್ ರೋಗದಿಂದ ನಷ್ಟಕೊಳ್ಳಗಾದ ರೈತರಿಗೆ ಸರ್ಕಾರ ಆರ್ಥಿಕ ನೆರವನ್ನು ನೀಡಿದೆಯೇ;<br>(ಸಂಪೂರ್ಣ ವಿವರವನ್ನು ಒದಗಿಸುವುದು)</td><td>ಮೈಸೂರು ಬಿತ್ತನೆ ಪ್ರದೇಶದಲ್ಲಿ ಬಿತ್ತನೆ ಬೆಳೆಗಾರರು ಉತ್ಪಾದಿಸುವ ಗೂಡುಗಳಲ್ಲಿ ಗಂಟುರೋಗ ಗೋಚರಿಸಿದ ಸಂದರ್ಭದಲ್ಲಿ ಬಿತ್ತನೆ ಗೂಡುಗಳನ್ನು ಬಿತ್ತನೆಗೆ ಯೋಗ್ಯವಾಗಿಲ್ಲದ ಕಾರಣ ನೂಲುಬಿಚ್ಚಾಣಿಕೆಗೆ ವಿಲೇವಾರಿ ಮಾಡಲಾಗುವುದು. ಇಂತಹ ಪ್ರಸಂಗಗಳಲ್ಲಿ ರೇಷ್ಮೆ ಬೆಳೆಗಾರರಿಗೆ ಆಗುವ ನಷ್ಟಕ್ಕೆ ಪರಿಹಾರ ನೀಡುವ ಕುರಿತು ಕೋರಿಕೆ ಬಂದಲ್ಲಿ ಕ್ರಮವಹಿಸಲಾಗುವುದು.</td></tr>
<tr><td>ಉ</td><td>ಫೆಬ್ರಿನ್ ರೋಗವು ಹರಡದಂತೆ ರೈತರಿಗೆ ಜಾಗೃತಿಯನ್ನು ಮೂಡಿಸಲು ರೇಷ್ಮೆ ಕೃಷಿಕ್ಷೇತ್ರಕ್ಕೆ ಅನುಗುಣವಾಗಿ ಎಷ್ಟು ಮಂದಿ ರೇಷ್ಮೆ ಕೃಷಿ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಸರ್ಕಾರ ನಿಯೋಜಿಸಿದೆ.</td><td>ಮೈಸೂರು ಬಿತ್ತನೆ ಪ್ರದೇಶದಲ್ಲಿ ಫೆಬ್ರಿನ್ ರೋಗದ ಸಮಗ್ರ ನಿರ್ವಹಣೆಗಾಗಿ ರೇಷ್ಮೆ ಇಲಾಖೆಯಿಂದ ಒಟ್ಟು 92 ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸಿದ್ದು, ತಮ್ಮ ದೈನಂದಿನ ಕೆಲಸ ಕಾರ್ಯಗಳೊಂದಿಗೆ ವಿಚಾರ ಮಂಥನ, ಕಾರ್ಯಾಗಾರ ಮತ್ತು ಸಭೆಗಳನ್ನು ನಡೆಸಿ ಫೆಬ್ರಿನ್ ರೋಗ ತಡೆಗಟ್ಟುವಲ್ಲಿ ಕಾರ್ಯೋನ್ಮುಖರಾಗಿದ್ದಾರೆ.</td></tr>
<tr><td>ಊ</td><td>ರೇಷ್ಮೆ ಇಲಾಖೆಯಲ್ಲಿ ವೃಂದವಾರು ಅಧಿಕಾರಿ ಮತ್ತು ಸಿಬ್ಬಂದಿಗಳ ಪಟ್ಟಿಯನ್ನು ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ ಪ್ರಸ್ತುತ ಸ್ಥಿತಿಯೇನು?<br>(ಸಂಪೂರ್ಣವಿವರವನ್ನುಒದಗಿಸುವುದು)</td><td>ರೇಷ್ಮೆ ಇಲಾಖೆಯಲ್ಲಿ ಒಟ್ಟು 2695 ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 1308 ಅಧಿಕಾರಿ ಮತ್ತು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, 1387 ಹುದ್ದೆಗಳು ಖಾಲಿ ಇರುತ್ತವೆ.<br>ವೃಂದವಾರು ವಿವರ ಕೆಳಕಂಡಂತಿದೆ.
<table>
<tr><th>ವೃಂದ</th><th>ಮಂಜೂರು</th><th>ಭರ್ತಿ</th><th>ಖಾಲಿ</th></tr>
<tr><td>ಎ</td><td>59</td><td>54</td><td>5</td></tr>
<tr><td>ಬಿ</td><td>373</td><td>203</td><td>170</td></tr>
<tr><td>ಸಿ</td><td>1888</td><td>806</td><td>1082</td></tr>
<tr><td>ಡಿ</td><td>375</td><td>245</td><td>130</td></tr>
<tr><td>ಒಟ್ಟು</td><td>2695</td><td>1308</td><td>1387</td></tr>
</table>
</td></tr>
</table>

**ರೇಷ್ಮೆ 80 ರೇಕ್ಯುವಿ 2023**

ಕೆ. ವೆಂಕಟೇಶ್

(ಕೆ.ವೆಂಕಟೇಶ್)

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**